

ವಿರಳ ಜೈವಿಕ ವೈವಿಧ್ಯವಿರುವ ಪ್ರದೇಶವಾಗಿದೆ. ಕಾಡುಗಳ ವಿನಾಶ, ನಗರೀಕರಣ, ಕೃಷಿ ಭೂಮಿಯ ಅತಿಯಾದ ವಿಸ್ತರಣೆಗಳು ಜೈವಿಕ ವೈವಿಧ್ಯದ ವಿನಾಶಕ್ಕೆ ಕಾರಣವಾಗಿವೆ. ವಿಶ್ವ ಪರಿಸರ ಯೋಜನೆಯ ವರದಿಯ ಪ್ರಕಾರ, ಪ್ರತಿ 24 ಗಂಟೆಗೆ, ಭೂಮಿಯ ಮೇಲಿನ ಸುಮಾರು 200 ಪ್ರಭೇದಗಳು ನಾಶವಾಗುತ್ತಿವೆ. ಪ್ರತಿವರ್ಷ 38,300 ಚದರ ಕಿ.ಮೀ. ಕಾಡು ನಾಶವಾಗುತ್ತಿದೆ. ಇವೆಲ್ಲದರ ಪರಿಣಾಮವಾಗಿ ಮಾನವನನ್ನೂ ಬಾಧಿಸಬಲ್ಲ ಹಲವಾರು ರೋಗಕಾರಕ (ಪ್ಯಾಥೋಜನ್) ಜೀವಿಗಳನ್ನು



ತಮ್ಮಲ್ಲಿಟ್ಟುಕೊಂಡಿರುವ ವನ್ಯಜೀವಿಗಳ ಮತ್ತು ಮಾನವನ ಸಂಪರ್ಕ ಹೆಚ್ಚಾಗುತ್ತಿದೆ. ಅಲ್ಲೆಲ್ಲೋ ಅಡವಿಯಲ್ಲಿ ತಮ್ಮಲ್ಲಿದ್ದ ರೋಗಕಾರಕಗಳನ್ನು ಹಂಚುತ್ತಿದ್ದ ವನ್ಯಜೀವಿಗಳಿಗೆ ಅದು ಅಷ್ಟು ಸುಲಭವೂ ಆಗಿರಲಿಲ್ಲ. ಇದಕ್ಕೆ ಕಾರಣ ಅಲ್ಲಿದ್ದ ಅತ್ಯಂತ ಸಂಕೀರ್ಣ ಪರಿಸರ ವ್ಯವಸ್ಥೆಯಿಂದಾಗಿ ಅವು ಬಹು ಬೇಗನೇ ದುರ್ಬಲಗೊಳ್ಳುತ್ತವೆ. ಆದರೆ ಮಾನವ ವಾಸದಂತಹ ಸರಳ ಪರಿಸರ ವ್ಯವಸ್ಥೆಯಲ್ಲಿ ಅವು ಬಹಳ ಸುಲಭವಾಗಿ ಪ್ರಸರಣಗೊಳ್ಳುತ್ತವೆ. ಇದರ ಉದಾಹರಣೆಗಳು ನಮ್ಮ ಮುಂದಿವೆ. 1990ರಲ್ಲಿ ಮಲೇಷ್ಯಾದಲ್ಲಿ ಕಾಡುಗಳನ್ನು ಕಡಿದಾಗ ಆ ಕಾಡುಗಳ ಹಣ್ಣಿನ ಮರದಲ್ಲಿದ್ದ ಬಾವಲಿಗಳೆಲ್ಲವೂ ಜನವಸತಿಯ ಮಾವಿನ ಮರಗಳಿಗೆ ವರ್ಗಾವಣೆಗೊಂಡವು. ಬಾವಲಿಗಳು ತಮ್ಮ ದೇಹದಲ್ಲಿ ಪೋಷಿಸುವ ರೋಗಕಾರಕ ಜೀವಿಗಳು ಅವುಗಳಿಗೆ ಯಾವುದೇ ಹಾನಿಯನ್ನು ಮಾಡುವುದಿಲ್ಲ. ಆದರೆ ಬೇರೆಯ ಸಾಕು ಪ್ರಾಣಿಗಳು ಅಥವಾ ಮಾನವನ ಸಂಪರ್ಕಕ್ಕೆ ಬಂದಾಗ, ಅಲ್ಲಿ ರೋಗವನ್ನುಂಟು ಮಾಡುತ್ತವೆ. ಇದರಿಂದ ಆಗ ಮಲೇಷ್ಯಾದಲ್ಲಿ ನಿಫಾ ವೈರಸ್ ಕಾಣಿಸಿಕೊಂಡಿತು. ಹಾಗೆಯೇ ಆಫ್ರಿಕಾದ ಕಾಡುಗಳ ಚಿಂಪಾಂಜಿಗಳಿಂದ ಎಬೋಲಾ, ನೈಜೀರಿಯಾದಲ್ಲಿ ಲಾಸಾ ಫೀವರ್, ಎಚ್.ಐ.ವಿ, ಸಾರ್ಸ್, ಹಕ್ಕಿಜ್ವರ, ಹೀಗೆ ಮಾನವನಿಗೆ ಸುಮಾರು ಶೇ.60ರಷ್ಟು ರೋಗಗಳ ಮೂಲ ವನ್ಯಜೀವಿಗಳು.

ಪ್ರಕೃತಿ ಕೆಲವನ್ನು ನೆಲದಡಿಯಲ್ಲಿ, ಹಲವನ್ನು ಸಾಗರದಾಳದಲ್ಲಿ, ಮತ್ತೆ ಕೆಲವನ್ನು ದಟ್ಟ ಕಾಡುಗಳ ಗರ್ಭದಲ್ಲಿ ಹುದುಗಿಸಿ ಇಟ್ಟಿತ್ತು. ಒಂದೊಂದಾಗಿ ಅವೆಲ್ಲವನ್ನೂ ಬಗೆದು ತೆಗೆಯುತ್ತಿರುವ ಮಾನವನ ಕೆಲಸದ ಪರಿಣಾಮವೇ ನಾವಿಂದು ಎದುರಿಸುತ್ತಿರುವ ಪರಿಸ್ಥಿತಿ. ಮನುಷ್ಯ ವನ್ಯಜೀವಿಗಳ ನಡುವಿನ ದೂರವನ್ನು ಕಾಯ್ದುಕೊಳ್ಳದೇ ಇದ್ದಾಗ ಮನುಷ್ಯ ಮನುಷ್ಯರ ನಡುವೆ ಅಂತರವನ್ನು ಕಾಯ್ದುಕೊಳ್ಳುವ ಪರಿಸ್ಥಿತಿ ತಲೆದೋರುತ್ತದೆ.

## ವೆಟ್ ಮಾರುಕಟ್ಟೆ - ಜೈವಿಕ ವೈವಿಧ್ಯ

ನಮಗೆಲ್ಲ ತಿಳಿದಿರುವಂತೆ ಕೋವಿಡ್ 19ರ ಉಗಮಸ್ಥಾನ ಚೀನಾದ ವುಹಾನ್. ಅಲ್ಲಿಯ ಮಾರುಕಟ್ಟೆಯಲ್ಲಿ ಮಾರಾಟವಾಗುವ ಜೀವಿಗಳ ಮಾಂಸವನ್ನು ಸಂಸ್ಕರಿಸಿ ಇಡುವ ಶೈತ್ಯಾಗಾರಗಳಿಲ್ಲದ ಕಾರಣ, ಗ್ರಾಹಕನನ್ನು ಸೇರುವವರೆಗೆ ಅವು ಜೀವಂತವಾಗಿಯೇ ಇರುತ್ತವೆ. ಅಲ್ಲಿ ಮಾರಾಟವಾಗುವ ಪ್ರಾಣಿಗಳಲ್ಲಿ ಹಾವು, ಹಲ್ಲಿ, ಮೊಸಳೆ, ನರಿ,ಮೊಲ, ಇಲಿ, ಅಳಿಲು, ಆಮೆ, ಚೇಳು ಇತ್ಯಾದಿಗಳೊಂದಿಗೆ ಬಾವಲಿಯೂ ಸೇರಿದೆ. ಈ ರೀತಿಯಾಗಿ ಜೀವಂತ ಪ್ರಾಣಿಗಳನ್ನು ಮಾರುವ ಮಾರುಕಟ್ಟೆಗಳನ್ನು ವೆಟ್ ಮಾರ್ಕೆಟ್ ಎಂದು ಕರೆಯುತ್ತಾರೆ. ಇಂತಹ ಮಾರುಕಟ್ಟೆಗಳಲ್ಲಿ ಸರಿಯಾದ ಸ್ವಚ್ಛತೆಯೂ ಇರುವುದಿಲ್ಲ. ಆ ಸ್ಥಳದಲ್ಲಿ ರೋಗಕಾರಕ ವೈರಸ್ ಬಹಳ ಸುಲಭವಾಗಿ ಒಂದು ಪ್ರಭೇದದ ಜೀವಿಯಿಂದ ಇನ್ನೊಂದಕ್ಕೆ ಜಿಗಿಯುತ್ತವೆ.

ವುಹಾನ್ ರೀತಿಯಲ್ಲಿ ಪಶ್ಚಿಮದ ಕೆಲವು ನಗರಗಳಲ್ಲಿ, ಆಫ್ರಿಕಾದಲ್ಲಿ ಹತ್ತಾರು ಪ್ರಭೇದದ ಪ್ರಾಣಿಪಕ್ಷಿಗಳನ್ನು ಜೀವಂತ ಮಾರುವ ಮಾರುಕಟ್ಟೆಗಳಿವೆ. ಕಳೆದ ತಿಂಗಳು ವುಹಾನ್ ವನ್ಯಜೀವಿಗಳನ್ನು ಮಾರುವ ಮತ್ತು ತಿನ್ನುವ ಈ ತಾಣಗಳನ್ನು ಮುಚ್ಚಲಾಯಿತು ಹಾಗೇ ಬೀಜಿಂಗ್ ನಲ್ಲಿ ಅವುಗಳ ಮಾರಾಟದ ಮೇಲೆ ನಿಷೇಧವನ್ನು ಹೇರಲಾಯಿತು. ಜೈವಿಕ ವೈವಿಧ್ಯದ ನಾಶ ಮನುಕುಲಕ್ಕೆ ಮಾತ್ರವಲ್ಲ, ಇತರ ಜೀವಿಗಳಿಗೂ ಮಾರಕ ಎನ್ನುವುದು ಈಗಾಗಲೇ ಅಧ್ಯಯನಗಳಿಂದ ತಿಳಿದು ಬಂದಿರುವ ವಿಷಯ. ವನ್ಯಜೀವಿಗಳನ್ನು ಅವು ಇರುವ ಆವಾಸದಲ್ಲಿಯೇ ಅವುಗಳನ್ನು ರಕ್ಷಿಸುವ ಪ್ರಾಮಾಣಿಕ ಪ್ರಯತ್ನಗಳಾಗಬೇಕು. ಅಭಿವೃದ್ಧಿಯ ಹಾದಿಯ ಸ್ಪಷ್ಟ ಚಿತ್ರಣ ನಮಗಿರಬೇಕು. ಅದು ಮಾನವ ಕೇಂದ್ರಿತವಾಗಿರದೇ ಜೀವಿವೈವಿಧ್ಯ ಅಥವಾ ಸಮಸ್ತ ಜೀವಿಗಳ ಸಂರಕ್ಷಣೆಯನ್ನು ಗಮನದಲ್ಲಿರಿಸಿಕೊಂಡಿರಬೇಕು.

ಅತ್ಯಂತ ಕ್ಲಿಷ್ಟ ಪರಿಸ್ಥಿತಿಯಲ್ಲಿ ಈ ಬಾರಿಯ ವಿಶ್ವ ಪರಿಸರ ದಿನ ಬಂದಿದೆ ಮತ್ತದು 'ಜೈವಿಕ ವೈವಿಧ್ಯದ ಸಂರಕ್ಷಣೆ'ಯ ಧ್ಯೇಯವನ್ನು ಹೊತ್ತು ಬಂದಿದೆ. ಕೊರೊನಾ ಕಲಿಸಿದ ಪಾಠ ಮನುಕುಲವನ್ನು ಎಚ್ಚರಿಸಬೇಕು. ಇನ್ನಾದರೂ ಜೈವಿಕ ವೈವಿಧ್ಯದ ಸಂರಕ್ಷಣೆಗೆ ಗಂಭೀರವಾಗಿ ಪ್ರಯತ್ನಿಸಬೇಕು.